**<u>ದಿನಾಂಕ:25-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಕೆಬಿಎನ್. ವಕೀಲರಿಂದ</u>**

ದಿಃ06-08-2017 ರಂದು ಷಡಕ್ಷರಿಯವರು ತೀರಿಕೊಂಡಿರುತ್ತಾರೆ. ನಾನು ಷಡಕ್ಷರಿಯವರ 2 ನೇ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ, ಕೊಟ್ಟಿದ್ದೇನೆ. ಪ್ರತಿವಾದಿಗಳು ಮಾತ್ರ ಷಡಕ್ಷರಿಯವರ ವಾರಸುದಾರರು ಎಂದರೆ ಸರಿಯಲ್ಲ. ನಾನು ಷಡಕ್ಷರಿಯವರನ್ನು ಕಾನೂನುಬದ್ಧವಾಗಿ ಮದುವೆಯಾಗಿಲ್ಲ ಎಂದರೆ, ಆಮೇಲೆ ಕಾನೂನುಬದ್ಧ ಎಂದು ತೋರಿಸಿರುತ್ತೇವೆ. ನನ್ನ ಬಳಿ ಮದುವೆ ಆಗಿರುವ ಬಗ್ಗೆ ದಾಖಲೆ ಮತ್ತು ಫೋಟೋಗಳು ಇರುತ್ತವೆ. ಷಡಕ್ಷರಿಯವರು ಸಾಲ ಜಾಸ್ತಿಯಾಗಿದೆ ಎಂದು ತೀರಿಕೊಂಡಿರುತ್ತಾರೆ ಎಂದರೆ, ಷಡಕ್ಷರಿಯವರು ಪ್ರತಿವಾದಿಗಳ ಹತ್ತಿರ ಇದ್ದರು. ಸಾಲ ಜಾಸ್ತಿಯಾಗಿದೆ ಎಂದು ತೀರಿಕೊಂಡಿರುತ್ತಾರೆ ಎನ್ನುವುದು ಸುಳ್ಳು. ರೈತನ ಆತ್ಮಹತ್ಯೆ ಎಂದು ಪರಿಹಾರ ಕೋರಿ ನಿಪಿ-17 ರಂತೆ ನೋಟೀಸ್ ಕಳಿಸಿದ್ದರು. ಷಡಕ್ಷರಿಯವರ ಸಾವು ರೈತನ ಆತ್ಮಹತ್ಯೆ ಎಂದು ಪರಿಗಣಿಸಿ, ಪರಿಹಾರವನ್ನು ಕೊಟ್ಟಿರುತ್ತಾರೆ ಎಂದರೆ, ಅದು ಸುಳ್ಳು. ಪರಿಹಾರದಲ್ಲಿ ನನಗೆ ಸ್ವಲ್ಪ ಪರಿಹಾರ ಬರಲಿ ಎಂದು ನೋಟೀಸ್ ಕೊಟ್ಟಿದ್ದೆ. ಷಡಕ್ಷರಿಯವರು ನನ್ನ ಜೊತೆ ಯಾವತ್ತೂ ಸಹಬಾಳ್ವೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ಷಡಕ್ಷರಿಯವರು ಎಷ್ಟು ಸಾಲ ಮಾಡಿರುತ್ತಾರೆ ಮತ್ತು ಯಾವ ಯಾವ ಕಡೆ ಸಾಲ ಮಾಡಿರುತ್ತಾರೆ ಎನ್ನುವ ಬಗ್ಗೆ ನನ್ನ ಬಳಿ ದಾಖಲೆಗಳಿಲ್ಲ. ಮುಗುಳುವಳ್ಳಿಯಲ್ಲಿ ಕರ್ನಾಟಕ ಬ್ಯಾಂಕ್ ಇರುತ್ತದೆ ಎಂದರೆ ಸರಿ. ಷಡಕ್ಷರಿಯವರು ಸದರಿ ಕರ್ನಾಟಕ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಅದರಲ್ಲಿ ರೂ.41,000/- ಸಾಲ ಇತ್ತು. ಈ ಸಾಲವನ್ನು ತೀರಿಸಲು ನಾನು ಪ್ರಯತ್ನಪಟ್ಟಿಲ್ಲ. ಈ ಸಾಲವನ್ನು ಪ್ರತಿವಾದಿಗಳು ತೀರಿಸಿದ್ದಾರೆ ಎಂದರೆ ಸರಿ. ನಾನು ಷಡಕ್ಷರಿಯವರ ಕಾನೂನುಬದ್ಧ ಪತ್ನಿ ಅಲ್ಲದ ಕಾರಣ, ಷಡಕ್ಷರಿಯವರಿಗೆ ಎಲ್ಲೆಲ್ಲಿ ಮತ್ತು ಎಷ್ಟೆಷ್ಟು ಸಾಲ ಇತ್ತು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮಾತ್ರ ಕಾನೂನುಬದ್ಧ ವಾರಸುದಾರರಾದ ಕಾರಣ ಷಡಕ್ಷರಿಯವರ ಸಾಲ ತೀರಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಸ್ವಂತ ಊರು ಆರದವಳ್ಳಿ ಆಗಿರುತ್ತದೆ. ರೈತರ ಆತ್ಮಹತ್ಯೆ ಪರಿಹಾರವನ್ನು ಪ್ರತಿವಾದಿಗಳು ಪಡೆಯಬಾರದು ಎಂಬ ಕಾರಣದಿಂದ ನಾನು ಅನೇಕ ಕಡೆ ತಕರಾರು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಷಡಕ್ಷರಿಯವರ ವಾರಸುದಾರರು ಎಂದು ನ್ಯಾಯಾಲಯದಲ್ಲಿ ಅರ್ಜಿ ಹಾಕಿ ಆದೇಶ ಪಡೆದಿದ್ದಾರೆ ಎಂದರೆ, ನಾವೂ ಸಹಾ ಅವರ ವಾರಸುದಾರರಾಗಿರುತ್ತೇವೆ. ಷಡಕ್ಷರಿಯವರು ತಮ್ಮ ಜೀವಿತ ಕಾಲದಲ್ಲಿ ಯಾವುದೇ ಆಸ್ತಿಯನ್ನು

ನನಗೆ ದಾನವಾಗಿ ಕೊಟ್ಟಿಲ್ಲ. ಷಡಕ್ಷರಿಯವರು ಹಿಟ್ಟಿನ ಗಿರಣಿಯನ್ನು ಇಟ್ಟುಕೊಂಡಿದ್ದರು ಎಂದರೆ, ನಾನು ಮತ್ತು ಷಡಕ್ಷರಿಯವರು ಸೇರಿ ಹಿಟ್ಟಿನ ಗಿರಣಿ ನಡೆಸುತ್ತಿದ್ದೆವು. ದಾವೆಯನ್ನು ಸಲ್ಲಿಸಲು ಸತೀಶ್ ಎನ್ನುವವರು ವಕೀಲರಿಗೆ ಮಾಹಿತಿ ಕೊಟ್ಟಿರುತ್ತಾರೆ. ಸತೀಶ್ ಎನ್ನುವವರು ನನ್ನ ಸಂಬಂಧಿಯಲ್ಲ. ವಾದಪತ್ರದಲ್ಲಿ ಹೇಳಿದ ವಿಳಾಸದಲ್ಲಿ ನಾವು ವಾಸವಿದ್ದೇವೆ. ಯಾವುದೇ ಅಂಚೆ ಪತ್ರಗಳು ಈ ವಿಳಾಸಕ್ಕೆ ಬಂದು ತಲುಪುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿಯನ್ನು ಷಡಕ್ಷರಿಯವರು ಮದುವೆಯಾಗಿ ಸುಮಾರು 35 ವರ್ಷಗಳಾಗಿರುತ್ತವೆ ಎಂದರೆ, ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಎಲ್ಲೆಲ್ಲಿ ಇರುತ್ತವೆ ಎಂದು ಗೊತ್ತಿಲ್ಲ. ಖಾತಾ ನಂ.47/ಬಿಯನ್ನು ದಾವೆಯಲ್ಲಿ ಸೇರಿಸಿದ್ದೇನೆ. ಖಾತಾ ನಂ.47/ಬಿ ಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಇಲ್ಲಿಯವರೆಗೆ ನನ್ನ ಹೆಸರಿನಲ್ಲಿ ಯಾವುದೇ ಖಾತೆ ಇಲ್ಲ. ಖಾತಾ ನಂ.47/ಬಿ ಈ ಮನೆ ಷಡಕ್ಷರಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಇದರ ವಿಸ್ತೀರ್ಣ 16.5 X35 ಅಡಿಗಳಾಗಿರುತ್ತವೆ ಎಂದರೆ ಸರಿ. ಯಾವ ದಿನಾಂಕ, ಎಲ್ಲಿ, ನನ್ನ ಮದುವೆ ಷಡಕ್ಷರಿ ಯವರೊಂದಿಗೆ ಆಗಿದೆ ಎಂದರೆ, ನಾನು ಮರೆತಿದ್ದೇನೆ, ಆದರೆ ಆ ಬಗ್ಗೆ ದಾಖಲೆಗಳನ್ನು ತರುತ್ತೇನೆ. ನಾನು ಕಾನೂನುಬದ್ಧವಾಗಿ ಷಡಕ್ಷರಿಯವರನ್ನು ಮದುವೆಯಾಗಿಲ್ಲ, ಆದ್ದರಿಂದ ನನಗೆ ದಿನಾಂಕ ನೆನಪಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗಾಗಲೀ ನನ್ನ ಮಗನಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 9.8 ಗುಂಟೆ, 8 ಗುಂಟೆ, 9 ಗುಂಟೆ, 12.5 ಗುಂಟೆ ಹಾಗೂ 4 ಗುಂಟೆ ಜಮೀನುಗಳು ಷಡಕ್ಷರಿಯವರ ಪಿತ್ರಾರ್ಜಿತ ಆಸ್ತಿಗಳಾಗಿವೆ. ಇವುಗಳ ಸರ್ವೆ ನಂಬರುಗಳನ್ನು ಮತ್ತು ಅವುಗಳ ಚೆಕ್ಕುಬಂದಿಯನ್ನು ನನಗೆ ಹೇಳಲಿಕ್ಕಾಗುವುದಿಲ್ಲ. ಹಿಟ್ಟಿನ ಗಿರಣಿಯ ಸುತ್ತಮುತ್ತ ಇರುವ 4-5 ಹಳ್ಳಿಗಳಿಗೆ ಒಂದೇ ಹಿಟ್ಟಿನ ಗಿರಣಿಯಾಗಿರುತ್ತದೆ ಎಂದರೆ ಸರಿ. 1998-99 ರಿಂದಲೇ ಸದರಿ ಹಿಟ್ಟಿನ ಗಿರಣಿ ಇತ್ತು ಎಂದರೆ ಸರಿಯಲ್ಲ. ಸದರಿ ಹಿಟ್ಟಿನ ಗಿರಣಿಯನ್ನು ಷಡಕ್ಷರಿಯವರೇ ನೋಡಿಕೊಳ್ಳುತ್ತಿದ್ದರು ಎಂದರೆ, ನಾನೂ ಸಹಾ ನೋಡಿಕೊಳ್ಳುತ್ತಿದ್ದೆ. ಯಾವುದೇ ಸಮಯದಲ್ಲೂ ನಾನು ಹಿಟ್ಟಿನಗಿರಣಿಯನ್ನು ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಿಟ್ಟಿನ ಗಿರಣಿಯಲ್ಲಿ ಆಗ ಸಾಕಷ್ಟು ಆದಾಯ ಇತ್ತು ಎಂದರೆ, ನನಗೆ ಗೊತ್ತಿಲ್ಲ, ಅವರು ನನಗೆ ಹೇಳುತ್ತಿರಲಿಲ್ಲ. ಹಿಟ್ಟಿನ ಗಿರಣಿಯ ಆದಾಯದಿಂದ ದಾವೆಯ 6 ರಿಂದ 9 ನೇ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃವಿಃಒಃ

OS.43/2023
PW1

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.